ಕಿತ್ತೂರು ಕ್ಷೇತ್ರ ವ್ಯಾಪ್ತಿಯ ರಸ್ತೆ ಎಂದು ಹೇಳಿದರು.

ಕರ್ನಾಟಕ ಸರ್ಕಾರ

# ತಹಶೀಲ್ದಾರ್‌ರವರ ಕಾರ್ಯಾಲಯ

ಬೆಂಗಳೂರು ಉತ್ತರ ತಾಲ್ಲೂಕು, ಕಂದಾಯ ಭವನ, ನೆಲಮಹಡಿ,
ಕೆ.ಜಿ.ರಸ್ತೆ, ಬೆಂಗಳೂರು-560009

ಸಂ.ಎಂಎಸ್‌ಸಿ/ಸಿಆರ್/07/2019-20 ದಿನಾಂಕ: 09.03.2020

## ಸಾರ್ವಜನಿಕ ಬಹಿರಂಗ ಹರಾಜು ಪತ್ರಿಕಾ ಪ್ರಕಟಣೆ

ಉಲ್ಲೇಖ (1)ರ ಪತ್ರದಲ್ಲಿ ಐಎಂಎ ಸ್ವಾಮ್ಯದ 09 ಫ್ರಂಟ್ ಲೈನ್‌ನ Non Perishable ವಸ್ತುಗಳು, ಮತ್ತಿಕೆರೆ, ಯಶವಂತಪುರದಲ್ಲಿರುವ ಐಎಂಎ ಸ್ವಾಮ್ಯದ ಗೋಲ್ಡ್ ಮಳಿಗೆಯಲ್ಲಿರುವ (Non Perishable) ಪೀಠೋಪಕರಣಗಳು ಹಾಗೂ ಪಾಟರಿ ರಸ್ತೆ, ರಿಚರ್ಡ್ ಟೌನ್‌ನಲ್ಲಿ ಇರುವ ಜಿಮ್‌ನಲ್ಲಿ ಇರುವ (Non Perishable) ಪೀಠೋಪಕರಣಗಳು ಹಾಗೂ ಇತರೆ ವಸ್ತುಗಳನ್ನು (ಜಿಮ್‌ನ ಸಾಧನಗಳನ್ನು ಹೊರತುಪಡಿಸಿ) ಬಹಿರಂಗವಾಗಿ ಹರಾಜು ಮಾಡಲು ಮಾನ್ಯ ಜಿಲ್ಲಾಧಿಕಾರಿಗಳಿಂದ ಅಧಿಕೃತ ಜ್ಞಾಪನ ಹೊರಡಿಸಿದ್ದು, ಸದರಿ ವಸ್ತುಗಳನ್ನು ಪರಿಶೀಲಿಸಿಕೊಂಡು ವೀಕ್ಷಿಸಲು **ದಿನಾಂಕ: 13.03.2020 ಹಾಗೂ 16.03.2020ರಂದು ದಿನಾಂಕ ನಿಗದಿಪಡಿಸಲಾಗಿದೆ.** ಸದರಿ ವಸ್ತುಗಳನ್ನು **ದಿನಾಂಕ 17.03.2020ರಂದು** ಹರಾಜು ಪ್ರಕ್ರಿಯೆ ನಡೆಸಲು ದಿನ ನಿಗದಿಪಡಿಸಿದ್ದು, ಸದರಿ ಹರಾಜು ನಡೆಯುವ ಸ್ಥಳ: ಫ್ರಂಟ್ ಲೈನ್ ಫಾರ್ಮಸಿ, ಯುನಿಟ್ ಆಫ್ ಐ.ಎಂ.ಎ.ಎಫ್.ಎಲ್, ಹೆಲ್ತ್ ಕೇರ್ ಪ್ರೈ ಲಿ., ನಂ.21, 10 ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-03 ಇಲ್ಲಿ ನಿಗದಿಪಡಿಸಿದ್ದು, ಆಸಕ್ತ ಬಿಡ್ಡುದಾರರು ಈ ಕೆಳಕಂಡ ಷರತ್ತುಗೊಳಪಟ್ಟು ಭಾಗವಹಿಸಲು ಕೋರಿದೆ.

**ಷರತ್ತುಗಳು:**

1)ದಿನಾಂಕ: 17/03/2020 ರಂದು ಸಾರ್ವಜನಿಕವಾಗಿ ಹರಾಜು ಮಾಡಲಾಗುತ್ತದೆ. ಮೇಲ್ಕಂಡ ಹರಾಜು ಮಾಡುವ ಅಧಿಕಾರಿ ಹರಾಜನ್ನು ತನ್ನ ಸ್ವಂತ ವಿವೇಚನೆ ಮೇರೆಗೆ ಮೂರು ದಿನಗಳಿಗೆ ಮೀರದಂತೆ ಮುಂದೂಡಲು ಅವಕಾಶವಿರುತ್ತದೆ.

2) ಹರಾಜಿನಲ್ಲಿ ಭಾಗವಹಿಸುವವರು, ಬಹಿರಂಗ ಹರಾಜಿನ ದಿನವೇ ಶೇಕಡಾ 10% ಇಎಂಡಿ ಮೊತ್ತವನ್ನು ಪಾವತಿಸಿ, ಹರಾಜಿನಲ್ಲಿ ಭಾಗವಹಿಸಬೇಕು.

3)ಹರಾಜು ಕೂಗಿದ ವಸ್ತುಗಳನ್ನು 3 ದಿನಗಳ (ರಜಾ ದಿನಗಳನ್ನು ಹೊರತುಪಡಿಸಿ) ಒಳಗಾಗಿ ಉಳಿದ ಮೊತ್ತವನ್ನು ಪಾವತಿಸಿ ತಮ್ಮ ವಶಕ್ಕೆ ಪಡೆಯುವುದು.

4) ನಿಗದಿತ ಅವಧಿಯಲ್ಲಿ ವಸ್ತುಗಳನ್ನು ಹಾಗೂ ಉಳಿದ ಮೊತ್ತವನ್ನು ಪಾವತಿಸದಿದ್ದಲ್ಲಿ **EMD** ಪಾವತಿಸಿದ ಹಣವನ್ನು ಹರಾಜು ನಡೆಸುವ ಅಧಿಕಾರಿಗಳಿಂದ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ನಂತರ ಎರಡನೇ ಬಿಡ್ಡುದಾರರಿಗೆ ವಸ್ತುಗಳನ್ನು ಕೊಳ್ಳಲು ಅವಕಾಶ ಮಾಡಿಕೊಡಲಾಗುವುದು.

5)ಒಟ್ಟು 9 ಫ್ರಂಟ್ ಲೈನ್ ಫಾರ್ಮಾ, ಮತ್ತಿಕೆರೆ ಯಲ್ಲಿರುವ ಐಎಂಎ ಸ್ವಾಮ್ಯದ ಗೋಲ್ಡ್‌ಶಾಪ್‌ನ ಪೀಠೋಪಕರಣಗಳು ಹಾಗೂ ಪಾಟರಿ ರಸ್ತೆ, ರಿಚರ್ಡ್ ಟೌನ್‌ನಲ್ಲಿ ಇರುವ ಜಿಮ್‌ನ ಪೀಠೋಪಕರಣಗಳು ಹಾಗೂ ಇತರ ವಸ್ತುಗಳ (ಜಿಮ್ನ ಸಾಧನಗಳನ್ನು ಹೊರತುಪಡಿಸಿ) ಸಂಪೂರ್ಣ ವಿವರವನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ವೆಬ್ ಸೈಟ್ **WWW.bengaluruurban.nic.in** ನಲ್ಲಿ ಭೇಟಿ ನೀಡಿ ಪರಿಶೀಲಿಸಿಕೊಳ್ಳಬಹುದಾಗಿದೆ. ಹಾಗೂ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಬೆಂಗಳೂರು ಉತ್ತರ ತಾಲ್ಲೂಕು ಕಛೇರಿಯಲ್ಲಿ ಪಡೆಯುವುದು.

6)**ದಿನಾಂಕ: 13.03.2020 ಹಾಗೂ 16.03.2020 ರಂದು ಸಮಯ 10.30 ರಿಂದ ಸಂಜೆ 5 ಗಂಟೆವರೆಗೆ** ಹರಾಜು ಪ್ರಕ್ರಿಯೆಗೆ ಒಳಪಡುವ ಪೀಠೋಪಕರಣಗಳು ಹಾಗೂ ಇತರೆ ವಸ್ತುಗಳ ಭೌತಿಕ ಪರಿಶೀಲನೆಗೆ ಅವಕಾಶ ಒದಗಿಸಲಾಗಿದೆ. ಮತ್ತು ಹರಾಜಿಗೆ ಇಟ್ಟಿರುವ ವಸ್ತುಗಳ ದರಪಟ್ಟಿಯನ್ನು ಪ್ರದರ್ಶಿಸಲಾಗುವುದು.

7)ಬಿಡ್ ಮೊತ್ತವು ಸರಕು ಮತ್ತು ಸೇವಾ ತೆರಿಗೆ ಒಳಗೊಂಡಿರುತ್ತದೆ.

8) ಸರಕು ಮತ್ತು ಸೇವಾ ಕಾಯ್ದೆಯಡಿಯಲ್ಲಿ ನೋಂದಣಿಯಾದ ಬಿಡ್‌ದಾರರು ತಮ್ಮ ಜಿ.ಎಸ್.ಟಿ ಪ್ರಮಾಣ ಪತ್ರದ ಸ್ವಯಂ ಪ್ರಮಾಣಿತ ನಕಲನ್ನು ಸಲ್ಲಿಸುವುದು.

9)ಸಾಮಾಗ್ರಿಗಳ ಮೇಲೆ ಅನ್ವಯವಾಗುವ ಸರಕು ಮತ್ತು ಸೇವಾ ತೆರಿಗೆಯನ್ನು ಹರಾಜು ನಡೆಸುವ ಅಧಿಕಾರಿಯೇ ಸರ್ಕಾರಕ್ಕೆ ಸಲ್ಲಿಸುವುದು.

10)ಪ್ರತಿ ಬಿಡ್ ಮೇಲೆ ಮುಂದಿನ ಬಿಡ್‌ದಾರರು ಸೇರಿಸಿ ಕೂಗಬೇಕಾದ ಕನಿಷ್ಠ ಮೊತ್ತವು ಹರಾಜಿಗಿಟ್ಟ ಸಾಮಾಗ್ರಿಗಳ ಮೂಲ ಬೆಲೆ (ಮೌಲ್ಯ) ರೂಪಾಯಿ ಒಂದು ಲಕ್ಷಕ್ಕಿಂತ ಕಡಿಮೆ ಇದ್ದರೆ (ಅ) ರೂ.1000/ ಮತ್ತು (ಆ) ಹರಾಜಿಗಿಟ್ಟ ಸಾಮಾಗ್ರಿಗಳ ಮೂಲ ಬೆಲೆ (ಮೌಲ್ಯ) ರೂಪಾಯಿ ಒಂದು ಲಕ್ಷಕ್ಕಿಂತ ಹೆಚ್ಚು ಇದ್ದರೆ ರೂ.5000/- (ಅಂದರೆ ಪ್ರತಿ ಬಿಡ್‌ದಾರನೂ ತನಗಿಂತ ಮೊದಲು ಬಿಡ್ ಮಾಡಿದ ಮೊತ್ತಕ್ಕಿಂತ ಕನಿಷ್ಠ ರೂ.1000/- ಅಥವಾ ರೂ.5000/- ಹೆಚ್ಚಿಸಿ ಬಿಡ್ ಮಾಡಬೇಕು).

ಹೆಚ್ಚಿನ ವಿವರಗಳಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/-
ವಿಶೇಷ ತಹಶೀಲ್ದಾರ್
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು

DIPR/DDU/2752/2019-20

Scanned by CamScanner